ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅದನ್ನು ಪರಿಶೀಲಿಸುತ್ತೇವೆ.

ಶ್ರೀ ಸಿ. ಬೈರೇಗೌಡ.—ಈ ಯೋಜನೆಯನ್ನು ಕೈಬಿಡಲಾಗುತ್ತಿದೆ ಎಂದು ಹೇಳುತ್ತಿರುವುದು ನಿಜವೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅದು ಸರಿಯಲ್ಲ.

ಶ್ರೀ ಎ ಶರಣಪ್ಪ.— ದೇವದುರ್ಗ ತಾಲ್ಲೂಕು ಮಸಿಪುರದಲ್ಲಿ ಸೇಕಡ ೧೦ ಭಾಗ ಹಣ ಕೊಟ್ಟು ನಿರ್ಣಯ ಮಾಡಿದ್ದಾರೆ. ಆದರೂ ಈ ಯೋಜನೆ ಅನ್ವಯಿಸಿಲ್ಲ. ಅಲ್ಲಿ ನಾಲ್ಕೈದು ಮೈಲಿ ನೀರು ತರಲು ಹೋಗಬೇಕಾಗಿರುವುದರಿಂದ ಜಾಗ್ರತೆ ಈ ಯೋಜನೆ ಪ್ರಕಾರ ಕೆಲಸ ಕೈಕೊಳ್ಳುವಿರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ. ಬೋರ್‌ವೆಲ್ಸ್ ಎಲ್ಲಿ ಮಾಡಬೇಕು, ಎಲ್ಲಿ ಓಪನ್ ವೆಲ್ಸ್ ಮಾಡಬಹುದು ಎಂದು ನೋಡಿ ವ್ಯವಸ್ಥೆ ಮಾಡಬೇಕು, ಸುಮಾರು ಒಂದು ಸಾವಿರ ಹಳ್ಳಿಗಳಿಗೆ ಈ ವರ್ಷದ ಅಂತ್ಯದಲ್ಲಿ ಈ ರೀತಿ ಅನುಕೂಲ ಮಾಡಬೇಕು ಎಂಬ ಯೋಚನೆ ಇದೆ.

ILLEGAL ACTIVITIES OF SOME SOCIETIES IN KANAKAPURA TALUK

471. SRI S KARIAPPA (Kanakapura —

Will the Minister for Revenue be pleased to state :—

(*a*) the number of societies, locally called as clubs which have beed given licences or certificates in Kanakapura taluk during the past three years ;

(*b*) whether the Inspector General of Registration has received complaints regarding their illegal activities ;

(*c*) whether their activities are according to the aims and objects of their by-laws ;

(*d*) whether it has come to the notice of Government that the societies have become gambling houses ;

(*e*) the names of those societies with the names of persons running them ?

SRI N. HUTCHAMASTHY GOWDA (Minister for Revenue).—

(*a*) Four
(*b*) Yes.
(*c*) Being enquired into.
(*d*) Does not arise in view of reply to clause (*c*)
(*e*) As in the statement appended.

STATEMENT

Following are the four societies registered with the names of persons running them.

1 Indicate Social Association at Kanakapura Town (S.No. 145/1970-1971)

Sriyuths : Rama Rao, Kariyappa, Gopalappa, K. S. Murthy Rao, Nanja Setty, Ganesh and Govinda Raju.

2. The Maruthi Social Association, Kurupet, Kanakapura Taluk (S.No. 167/1968-69)

Sriyuths: Puttamade Gowda, Tavasaiah, Ramaiah, Hanumanthaiah, Kaleeraiah, Chikkeeraiah, Bombaiah, Mareeraiah and Chikavenkataiah.

3. Janaka Social Association, Kodihalli, Kanakapura Taluk (S.No. 130/1967-68)

Sriyuths: Lakshmi Gowda. Venkataswamy, Prasanna, Channachari, Shivarudraiah, Venkatagirish, Boodaiah, Muddaiah and Mahadeva.

4. Merchants Recreation Association, D. 48, Bus Stand Road, Kanakapura Town (S.No. 294/1970-71)

Sriyuths: K. B. Bolarajan, Venkata Setty, B. K. Raganath Rao, S. Nagaraju, Govindaraju, Narayana Setty and Rama Rao.

ಶ್ರೀ ಎಸ್. ಕರಿಯಪ್ಪ.—ಈ ಸೊಸೈಟಿಗಳಿಗೆ ಇನ್ ಪೆಕ್ಟರ್ ಜನರಲ್ ಆಫ್ ರಿಜಿಸ್ಟ್ರೇಷನ್ ಅಲ್ಲದೆ ಬೇರೆ ಯಾರಾದರೂ ಲೈಸನ್ಸ್ ಕೊಡುವರೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇಲ್ಲ.

ಶ್ರೀ ಎಸ್. ಕರಿಯಪ್ಪ.—ಉತ್ತರದಲ್ಲಿ ಇಂಥ ೪ ಸೊಸೈಟಿಗಳಿವೆ ಎಂದು ಹೇಳಿದೆ. ಬೌನಿನಲ್ಲಿ ಸುಮಾರು ೧೦ ಇವೆ ಇನ್‌ಸ್ಪೆಕ್ಟರ್ ಜನರಲ್ ಆಫ್ ರಿಜಿಸ್ಟ್ರೇಷನ್ ಅಲ್ಲದೆ ಬೇರೆ ಯಾರಾದರೂ ಲೈಸೆನ್ಸ್ ಕೊಡುವುದುಂಟೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇನ್‌ಸ್ಪೆಕ್ಟರ್ ಜನರಲ್ ಆಫ್ ರಿಜಿಸ್ಟ್ರೇಷನ್ ಅಲ್ಲದೆ ಬೇರೆಯವರು ಸೊಸೈಟಿ ಆಕ್ಟ್ ಪ್ರಕಾರ ರಿಜಿಸ್ಟರು ಮಾಡಲು ಅವಕಾಶವಿಲ್ಲ. ಮಾನ್ಯ ಸದಸ್ಯರು ಹೇಳಿರುವ ಸಂಘಗಳು ಬೇರೆಯಾದರೆ ಅವು ಯಾವ ಕಾನೂನಿನ ಪ್ರಕಾರ ರಿಜಿಸ್ಟರಾಗಿವೆ ಎಂದು ವಿಚಾರಿಸಿ ಹೇಳಬೇಕು.

ಶ್ರೀ ಎಸ್. ಕರಿಯಪ್ಪ.—ಈಗ ಒಂದೆರಡು ಸೊಸೈಟಿಗಳಿಗೆ ಲೈಸೆನ್ಸ್ ಕೊಟ್ಟಮೇಲೆ ಅವು ಕೆಲಸ ಮಾಡುತ್ತಿವೆಯೇ ಎಂದು ನೋಡಲು ವ್ಯವಸ್ಥೆ ಇದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸಾಮಾನ್ಯವಾಗಿ ಇರತಕ್ಕ ಪದ್ಧತಿ ಪ್ರಕಾರ ಧ್ಯೇಯೋದ್ದೇಶಗಳಿಗೆ ತಕ್ಕಂತೆ ಸಂಘ ನಡೆಯದಿದ್ದರೆ ಆ ವಿಚಾರವಾಗಿ ದೂರು ಬಂದರೆ ಪೋಲೀಸರಿಗೆ ತಿಳಿಸಿ ಅವರ ಮೂಲಕ ವಿಚಾರ ತಿಳಿದುಕೊಳ್ಳುವುದು ವಾಡಿಕೆಯಾಗಿದೆ.

SUPPLY OF ELECTRICITY TO OTHER STATES

492. Sri U. T. Fareed (Mangalore) .—

Will the Minister for Public Works and Electricity be pleased to state :—

the rate at which the electricity is sppplied to other State by M. S. E. B.?